# ಸುಂದರಲಾಲ್ ಬಹುಗುಣ

## ಮರಗಿಡಗಳು ರೂಪಿಸಿದ ಮನುಷ್ಯ



ಭಾರತದ ಪರಿಸರ ಚಳವಳಿಯಲ್ಲಿ ಸುಂದರಲಾಲ್ ಬಹುಗುಣ ಅವರದ್ದು ಮೊದಲ ಹೆಸರು. ಪ್ರಕೃತಿಯಲ್ಲಿ ದೈವವನ್ನು ಕಾಣುತ್ತಿದ್ದ ಬಹುಗುಣ, ಪರಿಸರ ಹೋರಾಟಕ್ಕೆ ಘನತೆಯನ್ನು ತಂದುಕೊಟ್ಟವರು ಹಾಗೂ ಚಳವಳಿಗಳ ಸಾಧ್ಯತೆಯನ್ನು ವಿಸ್ತರಿಸಿದವರು. ಐದು ದಶಕಗಳ ಕಾಲ ಅವರ ಒಡನಾಡಿ ಹಾಗೂ ಹೋರಾಟದ ಸಂಗಾತಿಯಾಗಿದ್ದ ವಿಜಯ್ ಜರ್ದಾರಿ ಅವರೊಂದಿಗಿನ ಈ ಸಂದರ್ಶನ ಬರಹ, ಬಹುಗುಣ ಅವರ ಅನನ್ಯತೆಯೊಂದಿಗೆ ಅವರ ನೇತೃತ್ವದಲ್ಲಿನ ಪರಿಸರ ಹೋರಾಟ ಬೆಳೆದು ಬಂದ ದಾರಿಯನ್ನೂ ದಾಖಲಿಸುತ್ತದೆ.



ವಿಜಯ್ ಜರ್ದಾರಿ

**■ ಆನಂದತೀರ್ಥ ಪ್ಯಾಟಿ**

‘ಸಂತನ ತೇಜಸ್ಸು; ಛಲ ಬಿಡದ ತ್ರಿವಿಕ್ರಮ; ಉತ್ಸಾಹದ ಸಂಕೇತ; ಯಾವತ್ತೂ ನಿರಾಶೆಗೆ ಈಡಾಗದ ವ್ಯಕ್ತಿತ್ವ. ಎಲ್ಲಕ್ಕಿಂತ ಮುಖ್ಯವಾಗಿ ಗಿಡಮರದ ಪ್ರತಿ ಎಲೆಯಲ್ಲೂ ಭಗವಂತನನ್ನು ಕಾಣುವ ಅನನ್ಯ ಭಾವ’

ಐದು ದಶಕಗಳ ಅವಧಿಯುದ್ದಕ್ಕೂ ತಮ್ಮ ಜತೆ ಒಡನಾಡಿದ ಗೆಳೆಯನ ಬಗ್ಗೆ ವಿಜಯ್ ಜರ್ದಾರಿ ಅತ್ಯಂತ ಸರಳ ಸಾಲುಗಳಲ್ಲಿ ಹೇಳುವುದು ಹೀಗೆ. ಮೇಲ್ನೋಟಕ್ಕೆ ಇವರು ತುಂಬಾ ಸರಳ; ಘರ್ವಾಲ್ ಪ್ರದೇಶದ ಜರ್ದಾರ್ ಹಳ್ಳಿಯ ಈ ರೈತ, ಹಿಮಾಲಯದ ಶ್ರೇಣಿಗಳಲ್ಲಿ ದೇಸಿ ಬೀಜ ಆಂದೋಲನವನ್ನು ರೂಪಿಸಿ ಸಮರ್ಥವಾಗಿ ಮುನ್ನಡೆಸುತ್ತಿರುವವರು. ‘ಅವರ ಎದುರು ನಾನೆಷ್ಟರವನು. ಅವರು ಬಹು ಗುಣ. ಸರಳಾತಿಸರಳ’ ಎಂದು ಸ್ನೇಹಿತನನ್ನು ವರ್ಣಿಸುತ್ತಾರೆ.

ಹೌದು. ಅವರು ಸದಾ ಸ್ಮರಿಸುವ ಆ ಸ್ನೇಹಿತನೇ ಸುಂದರಲಾಲ್ ಬಹುಗುಣ (9 ಜನವರಿ 1927 – 21 ಮೇ 2021). ಕಾಡನ್ನೇ ದೇವರೆಂದು ಭಾವಿಸಿ, ಅದರ ಸಂರಕ್ಷಣೆಗಾಗಿ ಸೆಣಸಾಡಿದ ಪರಿಸರಪ್ರೇಮಿ.

‘ಚಿಪ್ಕೋ ಆಂದೋಲನ’ ಪದದ ಜತೆಜತೆಗೇ ಭಿತ್ತಿಯಲ್ಲಿ ಮೂಡುವ ಚಿತ್ರ ಸುಂದರಲಾಲ್ ಬಹುಗುಣ ಅವರದು. ಹಿಮಾಲಯ ಪರ್ವತಶ್ರೇಣಿಯಲ್ಲಿ ಕಾಡಿನ ನಾಶದ ವಿರುದ್ಧ ಎತ್ತಿದ ದನಿಗೆ ಬಲ ತುಂಬಿದವರು. ‘ಚಿಪ್ಕೋ ಚಳವಳಿ’ಯನ್ನು ಜಗತ್ತಿಗೆ ತಲುಪಿಸಿದವರು; ಇತರ ಪರಿಸರ ಚಳವಳಿಗಳಿಗೂ ಸ್ಫೂರ್ತಿಯಾದವರು.

ಅಂದಹಾಗೆ, ಚಿಪ್ಕೋ ಚಳವಳಿಯ ಆರಂಭಿಕ ತಂಡದಲ್ಲಿ ಇದ್ದವರ ಪೈಕಿ ವಿಜಯ್ ಜರ್ದಾರಿ ಕೂಡ ಪ್ರಮುಖರು. ಸುಂದರಲಾಲ್ ಬಹುಗುಣ ಅವರು ಚಳವಳಿ ನಡೆಸಲು ಜರ್ದಾರಿಯವರನ್ನು ಹಳ್ಳಿಗಳಲ್ಲಿ ನಿಯೋಜಿಸಿ, ತಾವು ಮುಂದಿನ ಕೆಲಸ ಕೈಗೊಳ್ಳುತ್ತಿದ್ದರು. ಹಾಗೆ ನೋಡಿದರೆ, ಬಹುಗುಣ ಆಂದೋಲನ ಶುರುಮಾಡಿದ್ದು ಮದ್ಯಪಾನ ನಿಷೇಧಕ್ಕೆ ಆಗ್ರಹಿಸಿ!

‘ಅದು 1971ರ ಸಮಯ. ಹಳೇ ತೆಹ್ರಿಯಲ್ಲಿ ಮದ್ಯಪಾನದಿಂದ ನೂರಾರು ಕುಟುಂಬಗಳು ನಾಶವಾಗಿದ್ದವು. ಆ ಪಿಡುಗಿನ ವಿರುದ್ಧ ಬಹುಗುಣ ನೇತೃತ್ವದಲ್ಲಿ ಚಳವಳಿ ನಡೆಯುತ್ತಿತ್ತು. ಅಲ್ಲಿ ಅವರನ್ನು ಮೊದಲ ಸಲ ನಾನು ಭೇಟಿಯಾದೆ. ನಾನು ಆಗಿನ್ನೂ 25ರ ತರುಣ. ಬಹುಗುಣ ಅವರ ಹೋರಾಟದ ಶೈಲಿ, ಮಾತು ನನ್ನನ್ನು ಪ್ರಭಾವಿಸಿದವು’ ಐದು ದಶಕಗಳ ಹಿಂದಿನ ನೆನಪನ್ನು ಕೆದಕುತ್ತಾರೆ ಜರ್ದಾರಿ.

ಶರಾಬು ವಿರೋಧಿ ಆಂದೋಲನದ ಸಮಯದಲ್ಲೇ ಅವರ ದೃಷ್ಟಿ ಅರಣ್ಯದತ್ತ ನೆಟ್ಟಿತು. ಹೊರಗಿನಿಂದ ಗುತ್ತಿಗೆದಾರರು ಬಂದು ಹಿಮಾಲಯದಲ್ಲಿನ ವೃಕ್ಷಗಳನ್ನು ಕಡಿದು ಒಯ್ಯುತ್ತಿದ್ದರು. ಈ ಹಾನಿ ವಿರುದ್ಧ ‘ಸರ್ವೋದಯ ಆಂದೋಲನ’ ಹೋರಾಟ ನಡೆಸುತ್ತಿತ್ತು. ಅಂದಿನ ಉತ್ತರಾಖಂಡದ ಕೌಶಾನಿಯಲ್ಲಿದ್ದ ‘ಅನಾಸಕ್ತಿ ಆಶ್ರಮ’ದಲ್ಲಿ ಇದಕ್ಕೆ ಸಂಬಂಧಿಸಿದ ಚಟುವಟಿಕೆ ನಡೆಯುತ್ತಿದ್ದವು. ಅಲ್ಲಿದ್ದ ಸರಳಾ ಬೆಹನ್ ಅವರ ಹೋರಾಟದಿಂದ ಬಹುಗುಣ ಪ್ರಭಾವಿತರಾದರು. ತಾವೂ ಚಳವಳಿಯಲ್ಲಿ ಧುಮುಕಿದರು. “ಅಲ್ಲಿನ ಅರಣ್ಯದ ವೈವಿಧ್ಯ ಹಾಗೂ ಅದನ್ನು ಸಂರಕ್ಷಿಸಲು ನಡೆಯುತ್ತಿದ್ದ ಹೋರಾಟದ ಬಗ್ಗೆ ಜರ್ದಾರಿ ಅವರಿಗೆ ಸಾಕಷ್ಟು ಮಾಹಿತಿ ಇತ್ತು. ಅದನ್ನು ಬಹುಗುಣ ಜತೆ ತಾಸುಗಟ್ಟಲೇ ಹಂಚಿಕೊಂಡರು. ತಮ್ಮ ಆಂದೋಲನ ರೂಪಿಸಲು ಇದರಿಂದ ನೆರವಾಯಿತು ಎಂದು ಬಳಿಕ ಕೃತಜ್ಞತೆ ಸಲ್ಲಿಸಿದ್ದಾಗಿ ಜರ್ದಾರಿ ಹೇಳುತ್ತಾರೆ.

ಹಾಗೆಂದು, ಆ ಆಂದೋಲನ ಸವೆಸಬೇಕಾದ ಹಾದಿ ಸುಲಭವಾಗಿರಲಿಲ್ಲ. ಜರ್ದಾರಿಯವರ ಮಾತಿನಲ್ಲೇ ಬಣ್ಣಿಸುವುದಾದರೆ “ಬಹುತ್ ಬಹುತ್ ಬಹುತ್ ತಕಲೀಫ್.”

ಮರ ಕಡಿಯುವ ಕೆಲಸದಿಂದ ‘ಉದ್ಯೋಗ’ ಸಿಗುತ್ತದೆಯಲ್ಲ? ಈ ಭರವಸೆಯನ್ನು ಸ್ಥಳೀಯರಲ್ಲಿ ಬಲವಾಗಿ ಬೇರೂರಿಸಲಾಗಿತ್ತು. ಹೀಗಾಗಿಯೇ ಕಾಡು ಕಡಿಯುವ ಕಾರ್ಯಕ್ಕೆ ಅವರೆಂದೂ ವಿರೋಧಿಸಿರಲಿಲ್ಲ. “ಆ ಸವಾಲು ನಮ್ಮೆದುರು ದೊಡ್ಡದಾಗಿ ನಿಂತಿತ್ತು. ಕಾಡಿನ ನಾಶದಿಂದ ಎದುರಾಗುವ ತೊಂದರೆಗಳೇನು ಎಂಬುದನ್ನು ನಾನು, ಬಹುಗುಣ ಇತರರು ಜನರೆದುರು ತೆರೆದಿಟ್ಟೆವು. ನಮ್ಮೆಲ್ಲರಿಗಿಂತ ಬಹುಗುಣ ಅವರ ಮೆಲುದನಿ ಮತ್ತು ಪ್ರಖರ ವಿಚಾರಮಂಡನೆ ಜನರ ಮನತಟ್ಟುತ್ತಿತ್ತು. ನಾವು ಆರಂಭಿಕ ಭಾಷಣ ಮಾಡಿ, ಅವರಿಗೆ ವೇದಿಕೆ ಬಿಟ್ಟುಕೊಡುತ್ತಿದ್ದೆವು. ಸತತ ಎರಡು ತಾಸುಗಳವರೆಗೆ ನಿಖರ ಮಾಹಿತಿ, ಪರಿಸರಪರ ಕಾಳಜಿಯ ಮಾತುಗಳಿಂದ ಜನರ ಮನಸ್ಸಿನ ಮೇಲೆ ಪ್ರಭಾವ ಬೀರಲು